| | |
|---|---|
| ಪ್ರಾಸಾ | 05 |
| ಚಾಸಾ | 07 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಅಪರಾಧಿಕ ಪ್ರಕರಣ ಸಂಖ್ಯೆ: 32/2024**

**ದಿನಾಂಕ: 03.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಕಾಂತ್ |
| ತಂದೆಯ ಹೆಸರು | : | ಮುನೀಂದ್ರಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಬಾಗೇಪಲ್ಲಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಪ್ರಾಸಾ-1 ರಿಂದ 4, ಚಾಸಾ-5,6,8 ಮತ್ತು ಚಾಸಾ-9 ರವರ ಪರಿಚಯ ಇಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇಲ್ಲ.

2. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ಗೊತ್ತಿದೆ ಎಂದು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

| | |
|---|---|
| ಪ್ರಾಸಾ | 05 |
| ಚಾಸಾ | 07 |

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-</u>**

3. ದಿನಾಂಕ 04.05.2024 ರಂದು ಮದ್ಯಾಹ್ನ 3.30 ಗಂಟೆ ಸಮಯದಲ್ಲಿ ನಾನು ನನ್ನ ಸ್ನೇಹಿತ ನಾರಾಯಣಸ್ವಾಮಿ ಬಾಗೇಪಲ್ಲಿ ಟೌನ್ ಡಿ.ವಿ.ಜಿ ರಸ್ತೆಯಲ್ಲಿರುವ ಶಿವಾರೆಡ್ಡಿ ಕಾಂಪ್ಲೆಕ್ಸ್ ಬಳಿ ಟೀ ಕುಡಿಯುತ್ತಿದ್ದೇವು ಎಂದರೆ ಸರಿಯಲ್ಲ. ಅಲ್ಲಿಗೆ ನಮ್ಮ ಪರಿಚಯದ ನಮ್ಮ ಜನಾಂಗದ ಶ್ರೀನಿವಾಸಪುರದ ನಾರಾಯಣಸ್ವಾಮಿ ರವರ ಸ್ನೇಹಿತ ಲಕ್ಷ್ಮಣರವರು ಬಂದು ಟೀ ಕುಡಿದು ರಸ್ತೆಯ ಬದಿಯಲ್ಲಿ ನಿಂತು ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಅಲ್ಲಿಗೆ ಬಂದ ನಮ್ಮ ಪರಿಚಯದ ಶ್ರೀನಿವಾಸಪುರದ ಆನಂದ ರೆಡ್ಡಿ, ಅವರ ಮಕ್ಕಳಾದ ಅನಿಲ್, ಅಜೇಯ್, ಅವರ ಸಂಬಂಧಿಕರಾದ ಬಾಬು ರೆಡ್ಡಿ, ಮದು ಏಕಾಏಕಿ ನಾರಾಯಣಸ್ವಾಮಿರವರ ಬಳಿ ಬಂದು ಕೈಗಳನ್ನು ಹಿಡಿದುಕೊಂಡು ಮೈ ಮೇಲೆ ಹೊಡೆದರು ಎಂದರೆ ಸರಿಯಲ್ಲ. ಅನಿಲ್ ಎಂಬುವವನು ಕಾಲುಗಳಿಂದ ಒದ್ದು, ತನ್ನ ಬಲಕೈ ಮುಷ್ಟಿಯಿಂದ ನಾರಾಯಣಸ್ವಾಮಿ ಬಲಕೆನ್ನೆಯ ಮೇಲೆ, ತುಟಿಗಳ ಮೇಲೆ ಪಂಚ್ ಮಾಡಿದನು ಎಂದರೆ ಸರಿಯಲ್ಲ. ಅಜಯ್ ಎಂಬುವವನು ಕೆಳಗೆ ತಳ್ಳಿ ಕಾಲನ್ನು ಕತ್ತಿನ

| | |
|---|---|
| ಪ್ರಾಸಾ | 05 |
| ಚಾಸಾ | 07 |

ಮೇಲಿಟ್ಟು ತುಳಿದಿರುತ್ತಾನೆ ಎಂದರೆ ಸರಿಯಲ್ಲ. ನಂತರ ಎಲ್ಲರೂ ಕೈಗಳಿಂದ ಹೊಡೆದು ಆನಂದ ರೆಡ್ಡಿ ವಡ್ಡಿಜಾತಿ ನನ್ನ ಮಗನೇ, ನೀನು ನನ್ನ ಸೈಟಿನ ವಿಚಾರದಲ್ಲಿ ದಾರಿ ಬಿಡುವುದಿಲ್ಲ ಎನ್ನುತ್ತೀಯಾ ಎಂದು ಜಾತಿ ನಿಂದನೆ ಮಾಡಿದ್ದನು ಎಂದರೆ ಸರಿಯಲ್ಲ. ಆಗ ನಾನು, ಪ್ರಾಸಾ-3, ಲಕ್ಷ್ಮಣ, ಮತ್ತಿತರು ಅವರನ್ನು ತಳ್ಳಿ ಜಗಳ ಬಿಡಿಸಿದೇವು ಎಂದರೆ ಸರಿಯಲ್ಲ. ನಂತರ ವಿಚಾರ ತಿಳಿದಾಗ ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ನಾರಾಯಣಸ್ವಾಮಿ ಹಾಗೂ ಆತನ ಸ್ನೇಹಿತ ಲಕ್ಷ್ಮಣ ಮುನಿಸಿಪಲ್ ಕಚೇರಿಯ ಬಳಿ ಟೀ ಕುಡಿದು ಮಾತನಾಡುತ್ತಿದ್ದಾಗ ಟೀ ಅಂಗಡಿ ಬಳಿ ಆನಂದ ರೆಡ್ಡಿರವರು ಈ ಹಿಂದೆ ಇದ್ದ ನಿವೇಶನ ಹಳೇ ವೈಷಮ್ಯದ ಹಿನ್ನಲೆಯಲ್ಲಿ ನಾರಾಯಣಸ್ವಾಮಿಯನ್ನು ಕುರಿತು ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ನಾರಾಯಣಸ್ವಾಮಿರವರು ಅಲ್ಲಿಯೇ ಪಕ್ಕದಲ್ಲಿದ್ದ ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಪಡೆದುಕೊಳ್ಳಲು ಹೋದರು ಎಂದರೆ ಸರಿಯಲ್ಲ. ಆ ಬಗ್ಗೆ ದಿಃ 08.05.2024 ರಂದು ತನಿಖಾಧಿಕಾರಿಗೆ "ದಿಃ 04.05.2024---------------------- ದೌರ್ಜನ್ಯವೆಸಗಿರುವುದಾಗಿದೆ" ಎಂದು ಈಗ ಓದಿ ಹೇಳಿದಂತೆ ನಿಪಿ **14** ರಂತೆ ಓದಿ ಹೇಳಿದ್ದೆ ಎಂದರೆ ಸರಿಯಲ್ಲ.

| | |
|---|---|
| ಪ್ರಾಸಾ | 05 |
| ಚಾಸಾ | 07 |

ಆರೋಪಿತರಿಗೆ ನಾನು ಸಹಾಯ ಮಾಡುವ ಉದ್ದೇಶದಿಂದ ನಾನು ಕೃತ್ಯವನ್ನು ಕಣ್ಣಾರೆ ನೋಡಿದ್ದರು ನೋಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತ ಪರ ಶ್ರೀ. ಎನ್.ಕೆ. ಶ್ರೀ.ಕೆ.ಎಸ್.ಎನ್. ಪರ ವಕೀಲರಿಂದಃ**

ಇರುವುದಿಲ್ಲ.

**ಮರುವಿಚಾರಣೆಃ ಇಲ್ಲ.**

**(ದಿನಾಂಕಃ 03.06.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**